ತುರುವೇಕೆರೆ ತಾಲ್ಲೂಕಿನ ಗ್ರಂಥಾಲಯಗಳಿಗೆ ಗ್ರಂಥಪಾಲಕರ ನೇಮಕಾತಿ.

1831(2430)

ಶ್ರೀ ಲಕ್ಷ್ಮೀ ನಾರಾಯಣ ಎಂ.ಡಿ. (ಅಣ್ಣಯ್ಯ): ಮಾನ್ಯ ವಯಸ್ಕರ ಶಿಕ್ಷಣ, ಗ್ರಂಥಾಲಯ ಹಾಗೂ ಮುದ್ರಣ ಮತ್ತು ಲೇಖನ ಸಾಮಗ್ರಿಗಳ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ತುರುವೇಕೆರೆ ತಾಲ್ಲೂಕಿನಲ್ಲಿ ಎಷ್ಟು ಗ್ರಂಥಾಲಯಗಳು ಮಂಜೂರಾಗಿವೆ;

ಆ) ಗ್ರಂಥಾಲಯಗಳಿಗೆ ಈಗಾಗಲೇ ಗ್ರಂಥಪಾಲಕರನ್ನು ನೇಮಕ ಮಾಡಲಾಗಿದೆಯೆ?

ಇ) ನೇಮಕ ಮಾಡುವಾಗ ಸರ್ಕಾರ ಯಾವ ಮಾನದಂಡ ಅನುಸರಿಸಲಿದೆ?

ಶ್ರೀ ಬಾಬುರಾವ್ ಚವ್ವಾಣ್ (ವಯಸ್ಕರ ಶಿಕ್ಷಣ, ಗ್ರಂಥಾಲಯ ಹಾಗೂ ಮುದ್ರಣ ಮತ್ತು ಲೇಖನ ಸಾಮಗ್ರಿಗಳ ರಾಜ್ಯ ಸಚಿವರು):

ಅ) ಶಾಖಾ ಗ್ರಂಥಾಲಯಗಳು 01

ಗ್ರಾಮ ಪಂಚಾಯಿತಿ ಗ್ರಂಥಾಲಯಗಳು 13

ಒಟ್ಟು 14

ಆ) ದಬ್ಬೇಘಟ್ಟ ಅರೆಮಲ್ಲೇನಹಳ್ಳಿ ಹಾಗೂ ಮಣಿಚಿಂದೂರು ಹೊರತುಪಡಿಸಿ ಉಳಿದ ಗ್ರಂಥಾಲಯಗಳಿಗೆ ಗೌರವ ಸಂಭಾವನೆ ಮೇಲ್ವಿಚಾರಕರನ್ನು ನೇಮಕ ಮಾಡಲಾಗಿದೆ.

ಇ) ಶಾಖಾ ಗ್ರಂಥಾಲಯಗಳಿಗೆ ತಾಯಂ ಸಿಬ್ಬಂದಿಯನ್ನು ನೇಮಕಾತಿ ನಿಯಮಗಳ ಮೇರೆಗೆ ನೇಮಕ ಮಾಡಿಕೊಳ್ಳಲಾಗುತ್ತಿದೆ. ಗ್ರಾಮ ಪಂಚಾಯಿತಿ ಗ್ರಂಥಾಲಯಗಳಿಗೆ ಗೌರವ ಸಂಭಾವನೆ ಮೇಲ್ವಿಚಾರಕರನ್ನು ಮಾಸಿಕ ರೂ.750.00 ರಂತೆ ಸ್ಥಳೀಯ ಎಸ್.ಎಸ್.ಎಲ್.ಸಿ. ಉತ್ತೀರ್ಣರಾದ ಅಭ್ಯರ್ಥಿಗಳನ್ನು ನೇಮಕ ಮಾಡಿಕೊಳ್ಳಲಾಗುತ್ತಿದೆ.

ತುರುವೇಕೆರೆ ತಾಲ್ಲೂಕಿನಲ್ಲಿ ಪ್ರಧಾನ ಮಂತ್ರಿಗಳ ಗ್ರಾಮ ಸಡಕ್ ಯೋಜನೆ.

1832(2431)

ಶ್ರೀ ಲಕ್ಷ್ಮೀನಾರಾಯಣ ಎಂ.ಡಿ. (ಅಣ್ಣಯ್ಯ) (ತುರುವೇಕೆರೆ): ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1. ಪ್ರಧಾನ ಮಂತ್ರಿಗಳ ಸಡಕ್ ಯೋಜನೆಯಡಿ ರಾಜ್ಯದಲ್ಲಿ ಗ್ರಾಮೀಣ ಸಂಪರ್ಕ ರಸ್ತೆ ಕಾರ್ಯಕ್ರಮ ಯೋಜನೆ ಸಿದ್ಧಪಡಿಸಲಾಗಿದೆಯೆ;

2. ಹಾಗಿದ್ದಲ್ಲಿ ತುರುವೇಕೆರೆ ತಾಲ್ಲೂಕಿಗೆ ಎಷ್ಟು ಕಟ್ಟ ಸಿದ್ಧ ಮಾಡಲಾಗಿದೆ.

3. ಎಂದಿನಿಂದ ರಸ್ತೆ ಕೆಲಸ ಪ್ರಾರಂಭವಾಗಲಿದೆ; ಪೂರ್ಣಗೊಳ್ಳುವುದೆಂದು ಟೆಂಡರ್ ಕರೆದ ದಿನಾಂಕ ತಿಳಿಸುವುದು?

ಶ್ರೀ ಎಂ.ವೈ.ಘೋರ್ಪಡೆ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು):

1. 2000-2001ನೇ ಸಾಲಿನ ಯೋಜನೆ ಸಿದ್ಧಪಡಿಸಲಾಗಿದೆ. ಮತ್ತು ಕೇಂದ್ರ ಸರ್ಕಾರದಿಂದ ಅನುಮೋದನೆ ದೊರೆತಿರುತ್ತದೆ.

2. ತುರುವೇಕೆರೆ ತಾಲ್ಲೂಕಿನಲ್ಲಿ ಕೆಟಿ ರಸ್ತೆಯಿಂದ ಅನೆಕೆರೆವರೆಗೆ, ತೋರೆಮಾರನಹಳ್ಳಿ - ಭೂವನಹಳ್ಳಿ ಮಾರ್ಗವಾಗಿ ಹೋಗುವ ರಸ್ತೆಯ ಅಭಿವೃದ್ಧಿ ಕಾಮಗಾರಿ ಕ್ರಿಯಾ ಯೋಜನೆಯಲ್ಲಿ ಸೇರ್ಪಡೆಯಾಗಿದ್ದು ಅಂದಾಜು ವೆಚ್ಚ ರೂ.21.39 ಲಕ್ಷ ಆಗಿರುತ್ತದೆ.

3. ಸದರಿ ಕಾಮಗಾರಿಯನ್ನು ಗುತ್ತಿಗೆ ಆಧಾರದ ಮೇಲೆ 15ನೇ ಆಗಸ್ಟ್ 2001ರ ವೇಳೆಗೆ ಪ್ರಾರಂಭಿಸಲಾಗುವುದು. ಪ್ರಾರಂಭಗೊಂಡ 9 ತಿಂಗಳಲ್ಲಿ ಪೂರ್ಣಗೊಳಿಸಲಾಗುವುದು. ಟೆಂಡರ್ ಪ್ರಕಟಣೆಯನ್ನು ದಿನಾಂಕ: 23-3-2001ರಂದು ಪ್ರಕಟಿಸಲಾಗಿದೆ.

ಪ್ರಧಾನ ಮಂತ್ರಿಗಳ 100 ಲಕ್ಷ ಯೋಜನೆಯಡಿಯಲ್ಲಿ ಕೈಗೊಳ್ಳಲಿರುವ ಕಾಮಗಾರಿಗಳು.

1833(2432)